# ಕಪ್ಪೆ ತಂಬ್ರಾಟ್ಟಿ

ಮಲಯಾಳ ಮೂಲ :
ಇ. ಹರಿಕುಮಾರ್
ಕನ್ನಡ ಅನುವಾದ :
ಎಂ.ಎಸ್. ಲಕ್ಷ್ಮಣಾಚಾರ್



ಅಮ್ಮನನ್ನು ಕರೆದುಕೊಂಡು ಬರುತ್ತೇನೆಂದು ಹೇಳಿ ಅಪ್ಪ ಹೊರ ಹೋಗುವಾಗ ಮಗಳು ಸುಲು ಒಡೆದು ಹಾಳಾಗಿ ಹೋಗಿದ್ದ ಪೀಠದ ಮೇಲೆ ಕುಳಿತಿದ್ದಳು. ಅಪ್ಪನ ತಲೆ ಕಾಲುಹಾದಿಯಲ್ಲಿನ ಬೇಲಿಯ ಆಚೆ ಮರೆಯಾದಾಗ ಅವಳು ಪೀಠದ ಮೇಲೆ ಉರುಳಿಕೊಂಡು ರಾತ್ರಿ ಕಂಡ ಸ್ವಪ್ನದ ಬಗ್ಗೆ ಚಿಂತಿಸತೊಡಗಿದಳು. ಸ್ವಪ್ನದಲ್ಲಿ ಅವಳನ್ನು ಅಮ್ಮ ಓಡಿ ಬಂದು ತಬ್ಬಿ ಹಿಡಿದುಕೊಳ್ಳುತ್ತಿದ್ದಳು. ಈಗೀಗ ಸುಲು ಆಗಾಗ್ಗೆ ಈ ಸ್ವಪ್ನವನ್ನು ಕಾಣುತ್ತಿದ್ದಳು. ಅವಳಿಗೆ ಅಮ್ಮನ ಮುಖ ನೆನಪಿಗೆ ಬರುತ್ತಿರಲಿಲ್ಲ. ಆಕೆ ತಲೆ ಸವರುವುದು ಮಾತ್ರ ಕಾಣುತ್ತಿತ್ತು. ಆಕೆಯ ಸಾಮಿ ಅನುಭವವಾಗುತ್ತಿತ್ತು. ಅದರಿಂದ ಅವಳಿಗೆ ಸಂತೋಷವಾಗುತ್ತಿತ್ತು. ಬೆಳಗ್ಗೆ ಎದ್ದು ಅವಳು ಅಪ್ಪನೊಂದಿಗೆ ಹೇಳುವಳು, 'ಅಪ್ಪಾ ನಾನೊಂದು ಸ್ವಪ್ನವನ್ನು ಕಂಡೆ'. ಎಂಥ ಸ್ವಪ್ನವೆಂದು ಅವಳ ತಂದೆ ತಾಮಿ ಕೇಳುತ್ತಿರಲಿಲ್ಲ. ಅವನಿಗೆ ಗೊತ್ತಿತ್ತು. ಪೀಠದ ಮೇಲೆ ಹಾಗೆಯೇ ಉರುಳಿಕೊಂಡು ಅವಳು ಸ್ವಪ್ನದಲ್ಲಿ ಮಾತ್ರ ಬರುವ ತನ್ನ ತಾಯಿಗಾಗಿ ಕಾಯಲಾರಂಭಿಸಿದಳು. ಅವಳಿಗಿನ್ನೂ ನಾಲ್ಕು ವರ್ಷವಾಗಿತ್ತಷ್ಟೆ. ಅಪ್ಪ ಕೆಲಸಕ್ಕೆ ಹೋಗಿ ಬರುವ ವೇಳೆಗೆ ಕತ್ತಲಾಗಿಬಿಡುತ್ತಿತ್ತು. ಆ ಪುಟ್ಟ ಹುಡುಗಿ ಗುಡಿಸಲಿನಲ್ಲಿ ಒಬ್ಬಳೇ ಇರುತ್ತಿದ್ದಳು. ಹಸಿವಾದಾಗ ಪಾತ್ರೆಯಿಂದ ಗಂಜಿ ತೆಗೆದುಕೊಂಡು ಕುಡಿಯುವಳು.

ತಾಮಿ ಆ ಮಾಳಿಗೆಯ ಅಂಗಳದಲ್ಲಿ ಅಡ್ಡಾಡುತ್ತಾ ನಿಂತಿದ್ದನು. ಅವನ ನೆತ್ತಿಯ ಮೇಲೆ ಬಿಸಿಲು ಸುಡುತ್ತಿತ್ತು. ಹಿತ್ತಲಿನ ತೋಟದಲ್ಲಿದ್ದ ಮರಗಳು ಅವನನ್ನು ಸನ್ನೆ ಮಾಡಿ ಕರೆಯುತ್ತಿದ್ದವು. ಅಲ್ಲಿ ನೆರಳಿತ್ತು, ತಂಪಾಗಿಯೂ ಇತ್ತು. ಆದರೆ ಅವನಿಗೆ ಅಂಗಳದಿಂದ ಕದಲಲು ಸಾಧ್ಯವಾಗಲಿಲ್ಲ. ತಂಬ್ರಾನ್ ಹೊರಕ್ಕೆ ಬರದಿರುವುದಿಲ್ಲ. 'ಇನ್ನು ಇಲ್ಲಿ ನಿಲ್ಲಬೇಡ, ತಾಮಿ ನೀನು ಹೋಗು' ಎಂದು ತಂಬ್ರಾನ್ ಹೇಳಿಯಾಗಿತ್ತು. ಅರ್ಧ ಗಂಟೆ ಯೋಚಿಸಿಯೂ ಪ್ರಯೋಜನವಾಗಿರಲಿಲ್ಲ. ಹಾಗೆ ಹೊರಟು ಹೋಗಲು ಸಾಧ್ಯವಾಗುವ ವಿಷಯವೇ ಅದು?

ತಂಬ್ರಾನ್‌ಗೆ ಅವನು ತನ್ನ ಹೆಂಡತಿಯನ್ನು ವಹಿಸುವಾಗ ಆತ ತಾಮಿಗೆ ಹೇಳಿದ್ದನು; 'ಹಣ ತೆಗೆದುಕೊಂಡು ಬಂದರೆ ನೀನು ಯಾವಾಗ ಬೇಕಿದ್ದರೂ ಅವಳನ್ನು ಕರೆದುಕೊಂಡು ಹೋಗಬಹುದು'. ಇಂದು ಹಣ ಜತೆ ಮಾಡಿಕೊಂಡೇನೂ ಬಂದಿಲ್ಲ. ಎಲ್ಲಿಂದ ಎರಡು ಸಾವಿರ ರೂಪಾಯಿ ಜತೆ ಮಾಡಲಾಗುತ್ತೆ? ಬಡ್ಡಿ ಎಷ್ಟಾಗಿದೆಯೋ ತಿಳಿಯದು. ಆದರೂ ತಾಮಿ 'ಒಂದು ವಾರದ ಮಟ್ಟಿಗಾದರೂ ಕರೆದುಕೊಂಡು ಹೋಗಲೇ?' ಎಂದು ಕೇಳುತ್ತಿದ್ದಾನೆ. ಸಾಧ್ಯವಿಲ್ಲ. ಇನ್ನು ಇಂತಹ ಬಾಳು ತನ್ನಿಂದ ಬಾಳಲು ಸಾಧ್ಯವಿಲ್ಲ.

ಉತ್ತರದ ಕಡೆಗಿದ್ದ ಬಾಗಿಲೇನೋ ತೆಗೆದಿತ್ತು. ಹೊರಗಿನಿಂದ ಅದರೊಳಕ್ಕೆ ನೋಡಿದರೆ ಕತ್ತಲೆಯೋ ಕತ್ತಲೆ. ಆದ್ದರಿಂದ ತಂಬ್ರಾಟ್ಟಿಯು ಆ ಬಾಗಿಲಿನಿಂದ ಹೊರಕ್ಕೆ ಬಂದಾಗಲೇ ತಾಮಿಗೆ ಆಕೆ ಕಾಣಿಸಿದ್ದು.

'ಏನು ತಾಮಿ, ಇಲ್ಲಿ ನಿಂತುಬಿಟ್ಟೆ?'

'ಏನಿಲ್ಲ ತಂಬ್ರಾಟ್ಟಿ'

'ನಂದಿನಿ ಹಸು ಕರು ಹಾಕಿತು ಅಂತ ನೀನು ಹೋದ ವಾರವೇ ಹೇಳಿದ್ದೆ ಅಲ್ಲವೇ? ಮತ್ತೆ ಯಾಕೆ ಅದನ್ನು ಹೊಡೆದುಕೊಂಡು ಬರಲಿಲ್ಲ?'

'ಇನ್ನೆರಡು ದಿನವಾಗಲಿ ತಂಬ್ರಾಟ್ಟಿ. ವೈಲಾಯುಧನ್ ವೈದ್ಯರು ಔಷಧಿಯೊಂದನ್ನು ಕೊಡಬೇಕೆಂದು ಹೇಳಿದ್ದಾರೆ'.

'ಸರಿ, ಬೇಗ ಕರೆದುಕೊಂಡು ಬಾ. ಆಯಿತಾ? ಇಲ್ಲಿ ಹಾಲಿನ ಅವಶ್ಯಕತೆ ಇರುವವರು ಹೆಚ್ಚು ಇದ್ದಾರೆ'.

'ಸರಿ, ತಂಬ್ರಾಟ್ಟಿ'

'ನೀನೇಕೆ ಕಾದು ನಿಂತಿರುವೆ ಎಂದು ಹೇಳಲೇ ಇಲ್ಲವಲ್ಲ?'

ತಾಮಿ ಒಂದು ಮಾತೂ ಆಡದೆ ತಲೆ ಕೆರೆಯುತ್ತಾ ನಿಂತನು.

'ಏನು ವಿಷಯ ಹೇಳು'

'ನಾನು... ನಾನು... ಲಕ್ಷ್ಮಿಯ ವಿಷಯ ತಂಬ್ರಾನ್‌ರೊಂದಿಗೆ ಹೇಳಿದ್ದೆ'

ತಂಬ್ರಾಟ್ಟಿಯ ಮುಖದ ಚೆಹರೆಯೇ ಬದಲಾಯಿತು. ಆಕೆ ತಕ್ಷಣ ಒಂದು ಮಾತೂ ಆಡದೆ ಹಿಂದಕ್ಕೆ ತಿರುಗಿ ಸರ್ರನೆ ಒಳ ನಡೆದಳು. ಒಳಗೆ ಕತ್ತಲೆಯಲ್ಲಿ ತಾಮಿಯ ಕಣ್ಣುಗಳು ಒಂದು ನಿಮಿಷ ಅಲ್ಲಲ್ಲಿ ಹುಡುಕಾಡಿದವು. ಸಾಧಾರಣ ದಿವಸಗಳಲ್ಲಿ ಆಕೆ ಅಡಿಗೆಮನೆಯ ಕಡೆ ಕರೆದು ತಿಂಡಿ ತೀರ್ಥಗಳನ್ನು ತಿನ್ನಿಸಿಯೇ ಕಳುಹಿಸುತ್ತಿದ್ದಳು. ಜೊತೆಗೆ ಮನೆಯಲ್ಲಿ ಕಾದಿರುವ ಮಗಳಿಗೆ ಕೊಡಲೆಂದು ಏನಾದರೂ ಫಲಾಹಾರದ ಪೊಟ್ಟಣ ಕಟ್ಟಿ ಕೊಡುತ್ತಿದ್ದಳು. ಆದರೆ... ಇಂದು... ಅದೊಂದನ್ನೂ ಆಕೆ ಮಾಡಲಿಲ್ಲ. ಇನ್ನು ವಾಪಸ್ ಹೊರಟುಹೋಗೋಣ. ಮನೆಗೆ ಹೋಗಿ ಮಗಳು ಕೇಳುವ ಪ್ರಶ್ನೆಗೆ 'ನಿನ್ನ ಅಮ್ಮ ಇನ್ನೊಂದು ದಿನ ಬರುತ್ತೇನೆಂದು ಹೇಳಿದಳು' ಎಂದು ಉತ್ತರಕೊಡೋಣ. ಅವನು ಮೌನವಾಗಿ ಹಿಂದಿರುಗಿ ನಡೆದನು.

ಆ ಮಾಳಿಗೆಯ ಮಹಡಿಯಲ್ಲಿ ವರಾಂಡದಲ್ಲಿ ನಿಂತು ಇಣುಕಿ ನೋಡುತ್ತಿದ್ದ ಎರಡು ಕಣ್ಣುಗಳು ತಾಮಿಯು ಮತ್ತೆ ಹೊರಗಿನ ಮೆಟ್ಟಿಲುಗಳನ್ನಿಳಿದು ಮರಗಳ ನಡುವೆ ಮರೆಯಾದಾಗ ಹಿಂತೆಗೆದು ಒಳಕ್ಕೆ ಹೋದವು. ಅವಳು ಅವಸರದಿಂದ ಏಣಿಯ ಮೆಟ್ಟಿಲಿಳಿದು ಕೆಳ ಬಂದಳು. ತಂಬ್ರಾನ್ ಊಟ ಮುಗಿಸಿ ಬರುವ ಹೊತ್ತಾಗಿದೆ. ಕಾರಿಡಾರ್‌ನಿಂದ ಬಾವಲಿಗಳು ನೇತಾಡುತ್ತಿರುವ ಮಚ್ಚು ಮಾಳಿಗೆಯನ್ನು ಲಕ್ಷ್ಮಿ ಪ್ರವೇಶಿಸಿದಳು. ಅಂದು ಬೆಳಗ್ಗೆಯೇ ಅಡುಗೆ ಕೋಣೆಯ ಬಳಿಯಲ್ಲಿನ ಅಂಗಳದಲ್ಲಿದ್ದ ಹುಳಿಮಾವಿನ ಮರಕ್ಕೆ ಹಬ್ಬಿಸಿದ್ದ ಬಳ್ಳಿಯಿಂದ ಕಿತ್ತಿದ್ದ ಬುತ್ತಿ ಚಿಗುರು ವೀಳೆಯದೆಲೆಗಳನ್ನು ತಂದಿದ್ದಳು. ಹುಣಿಸೇ ಹಣ್ಣು ಹಚ್ಚಿ ತಿಕ್ಕಿ ತಿಕ್ಕಿ ಬೆಳಗಿಸಿದ್ದ ಹಿತ್ತಾಳೆ ತಟ್ಟೆಯಲ್ಲಿ ಆ ವೀಳೆಯದೆಲೆಯೊಂದಿಗೆ ಸುವಾಸನೆಯ ಸುಣ್ಣ ಅಡಕೆಗಳನ್ನು ಜೋಡಿಸಿಟ್ಟಳು. ಗೋಡೆಗೆ ಸೇರಿದಂತಿದ್ದ ಲವಂಗದ ವಾಸನೆ ಇರುವ ಪುಟ್ಟ ಅಲಮಾರಿನಲ್ಲಿ ಬಚ್ಚಿಟ್ಟಿದ್ದ ಪನ್ನೀರನ್ನೇ ತನ್ನ ದೇಹಕ್ಕೆ ಸಿಂಪಡಿಸಿಕೊಂಡು ಅವಳು ಆ ತಟ್ಟೆಯನ್ನು ಹಿಡಿದುಕೊಂಡು ಮಹಡಿಗೆ ಬಂದಳು. ತೇಗದ ಮರದ ದಪ್ಪ ದಪ್ಪ ಸರಳುಗಳಿರುವ ಕಿಟಕಿಗಳ ಮೂಲಕ ಹಿತ್ತಿಲಿನಿಂದ ಮರದ ಕೊಂಬೆಗಳನ್ನು ಸವರುತ್ತಾ ಗಾಳಿಯು ಒಳಕ್ಕೆ ಹರಿದು ಬಂದಿತು. ಅವಳು ಮಂಚದ ಮೇಲಿದ್ದ ಬೆಡ್‌ಷೀಟ್ ತೆಗೆದು ಜಾಡಿಸಿ ಸುಕ್ಕು ಇಲ್ಲದಂತೆ ಹಾಸಿದಳು. ತಲೆದಿಂಬು ತೆಗೆದುಕೊಂಡು ಮೃದುವಾಗಿ ತಡವಿದಳು. ಇನ್ನು ತಂಬ್ರಾನ್ ಬರುವವರೆಗೂ ಅವಳಿಗೆ ಮಾಡಲು ಕೆಲಸವೇನೂ ಇರಲಿಲ್ಲ. ಲಕ್ಷ್ಮಿ ಕಿಟಕಿಯ ಬಳಿ ಹೋಗಿ ಕೆಂಪು ಬಣ್ಣದ ನುಣ್ಣನೆಯ ನೆಲದ ಮೇಲೆ ಕುಳಿತಳು. ಹೊರಗೆ ಮರಗಳ ಆಚೆ ವಿಶಾಲವಾದ ಬಯಲಿದೆ. ತನ್ನನ್ನು ಮದುವೆಯಾದ ಗಂಡ ಈ ವೇಳೆಗೆ ಮನೆ ಸೇರಿರಬೇಕೆಂದು ಅವಳು ಊಹಿಸಿದಳು. ನಾಲ್ಕು ವರ್ಷ ತುಂಬಿದ್ದ ಮಗಳು ತನ್ನನ್ನು ಕೇಳುತ್ತಿರಬಹುದು. 'ಇಷ್ಟರಲ್ಲೇ ಅಮ್ಮ ಬರುತ್ತಾಳೆ ಮಗು' ಅಂತ ಅವಳ ಅಪ್ಪ ಹೇಳುತ್ತಿರಲೂಬಹುದು. ಅದಕ್ಕೆ ಸುಲು ಏನು ಉತ್ತರ ಕೊಟ್ಟಿರಬಹುದು?

ಏಣಿ ಮೆಟ್ಟಿಲುಗಳ ಮೇಲೆ ಭಾರವಾದ ಕಾಲುಗಳ ಹೆಜ್ಜೆಗಳನ್ನಪ್ಪಳಿಸುತ್ತಿರುವ ಶಬ್ದ ಕೇಳಿಸಿದಾಗ ಲಕ್ಷ್ಮಿ ಕುಳಿತಲ್ಲಿಂದ ಎದ್ದಳು. ಕಾಲ ಹೆಜ್ಜೆಗಳ ಶಬ್ದ ಕಾರಿಡಾರ್ ಮೂಲಕ ಹತ್ತಿರ ಬಂತು. ತೆರೆದಿಟ್ಟ ಬಾಗಿಲ ಮೂಲಕ ತಂಬ್ರಾನ್ ಒಳಬಂದು ಬಾಗಿಲು ಮುಚ್ಚಿ ಚಿಲಕು ಹಾಕಿದನು. ಭುಜದ ಮೇಲೆ ಹಾಕಿಕೊಂಡು ಬಂದಿದ್ದ ವೇಷ್ಟಿಯನ್ನು ಗೋಡೆಗೆ ಹೊಡೆದಿದ್ದ ಮರದ ಸ್ಟ್ಯಾಂಡ್‌ಗೆ ನೇತು ಹಾಕಿ ತಂಬ್ರಾನ್ ಸ್ನಾನದ ಕೋಣೆಗೆ ಹೋದನು. ಲಕ್ಷ್ಮಿ ಮಂಚದ ಒಂದು ಕೊನೆಯಲ್ಲಿದ್ದು ಎಲೆಗಳಿಗೆ ಸುಣ್ಣ ಹಚ್ಚುತ್ತಿದ್ದಳು.

ತಂಬ್ರಾನ್ ಟವೆಲ್ ತೆಗೆದುಕೊಂಡು ನರೆತ

NEXT PAGE........

